ಕರ್ನಾಟಕ ವಿಧಾನ ಸಭೆ

ಶುಕ್ರವಾರ 24ನೇ ಫೆಬ್ರವರಿ 1984

ಸದನವು ವಿಧಾನ ಸೌಧದ, ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9-00 ಗಂಟೆಗೆ ಸಮಾವೇಶ ಗೊಂಡಿತು

[ಅಧ್ಯಕ್ಷರು.—ಶ್ರೀ ಡಿ. ಬಿ. ಚಂದ್ರೇಗೌಡ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಗದಗ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜು

31ಗ (212) ಶ್ರೀ ಎಂ. ಜಿ ಜರತಾರಗರ್ (ಹುಬ್ಬಳ್ಳಿ) --ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಗದಗ ನಗರಕ್ಕೆ ಕುಡಿಯುವ ನೀರು ಪೂರೈಕೆ ಶಾಶ್ವತವಾಗಿ ಪರಿಹರಿಸಲು ಮಂತ್ರಿಮಂಡಲದಲ್ಲಿ ನಿರ್ಧರಿಸಿದ್ದು ನಿಜವೆ ;

ಆ) ತುಂಗಭದ್ರಾ ಯೋಜನೆಯಿಂದ ಗದಗ ನಗರಕ್ಕೆ ನೀರು ಪೂರೈಕೆಗಾಗಿ ನೀರು ಸರಬರಾಜು ಮಂಡಲಿ ಕಾರ್ಯಾರಂಭ ಯಾವಾಗ ಪ್ರಾರಂಭಿಸುತ್ತದೆ ;

ಇ) ಮೇಲ್ಕಂಡ ಯೋಜನೆಗೆ ತಗಲುವ ವೆಚ್ಚ ವೆಷ್ಟು ; ಆದರಲ್ಲಿ ಜೀವವಿಮಾ ಸಂಸ್ಥೆಯ ನೆರವು ಎಷ್ಟು ಹಾಗೂ ಸರ್ಕಾರದವರ ಯೋಜನೆ ಏನು ಹಾಗೂ ಎಷ್ಟು ವರ್ಷಗಳಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸಲಾಗುವುದು ?

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು). -- ಅ) ನಿಜ.

ಆ) ಈ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ "ಮಂಡಲಿಯ ಯೋಜನೆ" ಯನ್ನಾಗಿ ಪ್ರಾರಂಭಿಸಿ, ಸರ್ಕಾರದಿಂದ ಈ ದಿಶೆಯಲ್ಲಿ ಮಂಜೂರಾಗಿರುವ ಹಣದಿಂದ ಈಗಾಗಲೇ ಕಾರ್ಯಾರಂಭವಾಗಿದೆ.

ಇ) 1979 ರಲ್ಲಿ ನೀಡಲಾದ ಆಡಳಿತಾತ್ಮಕ ಅನುಮೋದನೆಯ ಪ್ರಕಾರ ಈ ಯೋಜನೆಯ ಅಂದಾಜಿನ ಮೊತ್ತ 708.00 ಲಕ್ಷ ರೂ. ಗಳು ಇದರಲ್ಲಿ ಸರ್ಕಾರದ ಪಾಲು 430.00 ಲಕ್ಷ ರೂಗಳು ಜೀವವಿಮಾ ನಿಗಮದ ಪಾಲು 278.00 ಲಕ್ಷ ರೂ. ಗಳು. 1983-84 ರ ದರಪಟ್ಟಿಯಂತೆ ಈ ಯೋಜನೆಯ ಅಂದಾಜು ವೆಚ್ಚ 940 ಲಕ್ಷ ರೂ. ಗಳಿಗೆ ಏರಿದೆ. ಈ ಕೆಲಸವನ್ನು ಹಣಕಾಸಿನ ವ್ಯವಸ್ಥೆಯಾದ ಸುಮಾರು 4-5 ವರ್ಷಗಳಲ್ಲಿ ಪೂರ್ಣಗೊಳಿಸಬಹುದು.

ಇದರ ಪೈಕಿ ಜೀವವಿಮಾ ಸಂಸ್ಥೆಯಿಂದ ರೂ. 306 ಲಕ್ಷ ಸಾಲ ಪಡೆಯಲು ಉದ್ದೇಶಿಸಿದೆ ಹಾಗೂ ಉಳಿದ ಹಣ ಒದಗಿಸಲು ಈ ಯೋಜನೆಯನ್ನು ದ್ವಿಮುಖ ಯೋಜನೆಯಲ್ಲಿ ಸೇರಿಸಿ ಈಗ ಅಂತರರಾಷ್ಟ್ರೀಯ ಹಣಕಾಸು ನೆರವನ್ನು ಪಡೆಯಲು ಭಾರತ ಸರ್ಕಾರದೊಂದಿಗೆ ಮುಂದಿನ ಕ್ರಮಗಳಿಗಾಗಿ ವ್ಯವಹರಿಸಲಾಗುತ್ತಿದೆ.

ಶ್ರೀ ಎಂ. ಜಿ. ಜರತಾರಗರ್.--1979 ರಲ್ಲಿ ಈ ಯೋಜನೆ ಕೈಗೊಂಡಿರುವುದರಿಂದ, ಇದಕ್ಕೆ ಹೆಚ್ಚಿಗೆ ಹಣ ಕೊಡಬೇಕಾಗಿತ್ತು. ಈ ದಿಸೆಯಲ್ಲಿ ಕಾರ್ಯ ಪ್ರಾರಂಭವಾಗಿದೆ ಎಂದು ಹೇಳಿದ್ದೀರಿ, ಇದು ಯಾವ ಹಂತದಲ್ಲಿದೆ ಜೀವವಿಮಾ ಕಾರ್ಪೊರೇಷನ್ 306 ಲಕ್ಷ ರೂಪಾಯಿ ಸಾಲ ಕೊಡುವುದಾಗಿ ಮುಂದೆ ಬಂದಿದೆಯೇ ? ಸರ್ವೆಕಾರ್ಯ ಮುಗಿಸಿದ್ದಾರೆಯೇ ? ಅವರು ಯಾವ ತಾರೀಖಿನಂದು ಹಣ ಕೊಡುತ್ತಾರೆ.

ಶ್ರೀ ಎಂ. ಚಂದ್ರಶೇಖರ್ --1979 ರಲ್ಲಿ ಈ ಯೋಜನೆ ಕೇವಲ ಗದಗ, ಬೆಟಗೇರಿಗೆ ಮಾತ್ರ ಮಾಡುವಂತಾಪ್ಪು ಇತ್ತು. ಆದರ ದರ ಹೆಚ್ಚಾಗಿರುವುದರಿಂದ, ಜೀವವಿಮಾ ಇಲಾಖೆಯವರು ಸಾಲವನ್ನು ಕೊಡಲಿಕ್ಕೆ ಮುಂದೆ ಬರಲಿಲ್ಲ. ಮುಂಡರಗಿ, ಮತ್ತು ಗದಗ, ಬೆಟಗೇರಿ ಮಧ್ಯೆ 11 ಹಳ್ಳಿಗಳು ಇವೆ. ಅವನ್ನೆಲ್ಲ ತಾನೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ ಎಂದು

ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಆದರೂ ಕೂಡ ಗದಗ, ಬೆಟಗೇರಿ ನೀರಿನ ಅವಶ್ಯಕತೆ ಬಹಳ ಮುಖ್ಯ ಯೆಂದು ಪರಿಗಣಿಸಿ ಇದನ್ನು ಬೋರ್ಡ್ ಯೋಜನೆ ಎಂದು ತೆಗೆದುಕೊಂಡು ಕಾರ್ಯಪ್ರಾರಂಭ ಮಾಡಲಾಗಿದೆ. ಬೋರ್ಡ್ ಯೋಜನೆ ಎಂದುತೆಗೆದುಕೊಂಡಿರುವುದರಿಂದ ದರ ಹೆಚ್ಚು ಆದರೂ ಮುನಿಸಿಪಾಲಿಟಿಯವರು ಕೊಡಲಿಕ್ಕೆ ಸಾಧ್ಯವಾಗದೇ ಇಷ್ಟರೂ, ಜೀವನವಿಮಾ ಇಲಾಖೆಯಿಂದ ಹಣ ದೊರಕುತ್ತದೆ 31-3-83ರಲ್ಲಿ 12 ಲಕ್ಷ ರೂಪಾಯಿ, 6-9-83 ರಲ್ಲಿ 14.5 ಲಕ್ಷ ರೂಪಾಯಿ, ಮತ್ತು 10-1-84 ರಲ್ಲಿ 8 ಲಕ್ಷ ರೂಪಾಯಿಕೊಡಲಾಗಿದೆ. ಪೈಪುಗಳನ್ನು ಹಾಕತಕ್ಕ ಕಾಮಗಾರಿ ಕೆಲಸ ನಡೆಯುತ್ತಿದೆ.

ಶ್ರೀ ಎ. ಜಿ. ದೊಡ್ಡಮೇಟಿ.--ಈ ಯೋಜನೆ ವಿಳಂಬ ಆಗಲಿಕ್ಕೆ ಕಾರಣ ಏನು? ಅದಕ್ಕೆ ಕಾರಣ ಕರ್ತರು ಯಾರು?

ಶ್ರೀ ಎಂ. ಚಂದ್ರಶೇಖರ್.--ಮೊಹಲು ಮಲಪ್ರಭಾದಿಂದ ನೀರನ್ನು ತರಬೇಕೆಂದು ಇತ್ತು. ಅನಂತರ ಆದನ್ನು ಕೈಬಿಟ್ಟು, ತುಂಗಭಧ್ರಾನ ದಿಯಿಂದ ನೀರನ್ನು ತರಬೇಕೆಂದು ಮಾಡಿದಾಗ ಒಂದು ಸಾವಿರ ಲೀಟರ್ ನೀರಿಗೆ 8-9 ರೂಪಾಯಿ ಆಗುತ್ತದೆಂದು ಪುರಸಭೆಯವರು ಆ ಹಣವನ್ನು ಕೊಡಲಿಕ್ಕೆ ಆಗುವುದಿಲ್ಲ ಎಂಪು ಹೇಳಿದಾಗ, ಆ ಯೋಜನೆಗೆ ಜೀವನವಿಮಾ ಕಾರ್ಪೂರೇಷನ್ ಸಾಲ ಕೊಡಲಿಕ್ಕೆ ಹಿಂದೆ ಹಾಕಿದರು ಆ ರೀತಿಯಿಂದ ವಿಳಂಬವಾಗಿದೆ.

ಶ್ರೀ ಎಂ. ಎಂ. ಜರತಾರ್‌ಗರ್,--ಬೋರ್ಡ್ ನೆಚ್ಚಕ್ಕ ಖರ್ಚಾಗುವುದನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ಚಂದ್ರಶೇಖರ್.--ಯಾವುದೇ ಯೋಜನೆ ತೆಗೆದುಕೊಳ್ಳಬೇಕಾದರೂ, ಆ ಇಲಾಖೆ ಬೋರ್ಡ್ ನೆಚ್ಚ ಆದಕ್ಕೆ ಸೇರಿಸಿ ಮಾಡಬೇಕಾಗುತ್ತದೆ. ಆಯಾಯ ಯೋಜನೆಗೇ ತಕ್ಕಂತೆ ಆ ಬಾಬ್ತು ಹಣ ಕೊಡಬೇಕಾಗುತ್ತದೆ.

ಚಿಂತಾಮಣಿ ತಾಲ್ಲೂಕಿನಲ್ಲಿ ಗ್ರಾಮಾಂತರ ವಿದ್ಯುದ್ಧೀಕರಣ ಯೋಜನೆಯ ಬಗ್ಗೆ

317 (433) ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ವಿದ್ಯುಶಕ್ತಿ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಪ್ರಶ್ನೆಗಳು :

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಗ್ರಾಮಾಂತರ ವಿದ್ಯುದ್ಧೀಕರಣ ಯೋಜನೆ ಮಂಜೂರಾಗಿಹೆಯೇ; ಹಾಗಿದ್ದಲ್ಲಿ, ಯಾವಾಗ;

ಆ) ಈ ಯೋಜನೆ ಪ್ರಕಾರ ಎಷ್ಟು ಗ್ರಾಮಗಳಿಗೆ ಹಾಗೂ ಎಷ್ಟು ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿ, ಸರಬರಾಜು ಮಾಡಲಾಗುವುದು (ಗ್ರಾಮವಾರು ಅಂಕ ಅಂಶಗಳನ್ನೊದಗಿಸುವುದು) ಹಾಗೂ ಇದಕ್ಕೆ ಮಂಜೂರಾಗಿರುವ ಮೊತ್ತವೆಷ್ಟು?

ಇ) ಈ ಯೋಜನೆಯನ್ನು ಪೂರೈಸಲು ವಾರ್ಡ್ ಯೂನಿಟ್ ಮತ್ತು ಸಿಬ್ಬಂದಿ ಹಾಗೂ ವಾಹನ ಸೌಕರ್ಯ ಬೇಕೆಂಬುದಾಗಿ ಚಿಂತಾಮಣಿಯ ವಿದ್ಯುಚ್ಛಕ್ತಿ ಇಲಾಖೆಯವರಿಂದ ಬೇಡಿಕೆ ಬಂದಿದೆಯೇ? ಹಾಗಿದ್ದಲ್ಲಿ, ಯಾವಾಗ?

ಶ್ರೀ ಜೆ. ಹೆಚ್. ಪಟೇಲ್ (ವಿದ್ಯುಚ್ಛಕ್ತಿ ಮತ್ತು ಅಬ್ಕಾರಿ ಮಂತ್ರಿಗಳು).—ಅ) ತಾ॥ 10-3-83 ರಲ್ಲಿ ಮಂಜೂರಾಗಿದೆ.

ಆ) 1) 25 ಗ್ರಾಮಗಳಿವೆ.

2) 600 ನೀರಾವರಿ ಪಂಪುಸೆಟ್ಟುಗಳು.

(ಅಂಕಅಂಶಗಳನ್ನು ಅನುಬಂಧದಲ್ಲಿ ಕೊಟ್ಟಿದೆ.)

3) 55.11 ಲಕ್ಷ ರೂಪಾಯಿಗಳು ಮಂಜೂರಾಗಿದೆ.

ಇ) ಬೇಡಿಕೆ ಬಂದಿದೆ.

1. ದಿನಾಂಕ. 6-5-83ರಲ್ಲಿ ವರ್ಕ್ಸ್ ಯೂನಿಟ್‌ಗಾಗಿ.

2. ದಿನಾಂಕ. 13-7-83ರಲ್ಲಿ ವಾಹನ (ಲಾರಿಗಾಗಿ)

ಮಾನ್ಯ ಸದಸ್ಯರು ಹಾಜರಿರಲಿಲ್ಲ.